# ಅಮಲನ ಕಥೆ

## 1-25

ಬಡವನೊಬ್ಬನು ಇರುತ ಸುಖದಲಿ
ಮಡದಿ ಮಕ್ಕಳ ಕೂಡೆ ನಲಿಯುತ
ನುಡಿದ ಭಾಶೆಗೆ ಎರಡು ಬಗೆಯದೆ
ಪಡೆದನಚ್ಯತ ಪದವಿಯ. ||೧||

ಕಡಿದು ಕಷ್ಟದಿ ತರುಗಳೆಲ್ಲವ
ಒಡೆದು ಬುಡಗಳ ಚದುರ ಕೈಯಲಿ
ಬಡವನಾದರು ಪಡುತ ಸುಖವನು
ಪಡೆದನಚ್ಯುತ ಪದವಿಯ. ||೨||

ರವಿಯು ಮಿನುಗುವ ಮುನ್ನ ಏಳುತ
ಸವಿಯ ಗಂಜಿಯನುಂಡು ಸುಖದಲಿ
ಲವ ಲವಿಕೆಯಿಂದಲಿ ಹೊರಟವಾ
ಕವಿದ ಮಂಜಿನ ಮಧ್ಯದಿ. ||೩||

ಕೊಡಲಿಯೊಂದನು ಹೆಗಲೊಳೇರಿಸಿ.
ಪೊಡವಿಯೊಡೆಯನ ನುತಿಸಿ ಪಾಡುತ,
ಅಡಿಗಡಿಗೆ ಹಿಂದಿರುಗಿ ನೋಡುತ,
ಬಿಡುತ ಎಲ್ಲರ ಹೊರಟನು. ||೪||

ತನಯರೆಲ್ಲರು ಆಶೆಯಿಂದಲಿ
ಮನೆಯ ಹೊಸಲಿನ ಮೇಲೆ ಸೇರುತ
ಬನದಡೆಗೆ ಪೋರಮಡುವ ತಂದೆಯ
ಮನದಿ ನೋಡುತ ನಿಂತರು. ||೫||

ಉದಯ ಕಾಲದ ಅಲರನೆಲ್ಲವ
ಮುದದಿ ಕೊಯ್ಯುತ ಮಡದಿಗೋಸುಗ

ಚದುರ ಗೋಪನ ಮನದಿನೆನೆಯುತ
ಮಧುರ ಕಂಠದಿ ಪಾಡಿದ. ||೬||

ನರರ ಕಾಯ್ವನೆ ಕಾಯು ನನ್ನನು;
ಸುರರ ಪೊರೆವನೆ ಸಲಹು ಸಕಲರ;
ಕರಗಳೆರಡನು ಮುಗಿದು ಬೇಡುವೆ;
ನಿರುತ ನಿನ್ನನು ಪೊಗಳುವೆ. ||೭||

ದೇವಪೂಜಿತ ಅಸುರನಿಂದಿತ
ಸೇವೆಗೈವರಿಗೆಲ್ಲ ಸೇವಕ
ಹಾವೆ ಹಾಸಿಗೆಯಾದ ದೇವನೆ
ಕಾವುದೆಲ್ಲರ ನಿತ್ಯವು. ||೮||

ರವಿಯ ರೂಪದಿ ಬರುವ ದೇವನೆ,
ನವಿಲು ಗರಿಯಿಂ ಮೆರೆವ ಲೋಲನೆ,
ಭುವನ ಪಾಲಕ, ಭುವನ ನಾಶಕ,
ಪವಿಯ ರೂಪನೆ ರಕ್ಷಿಸೈ. ||೯||

ಪುಷ್ಪಶೋಭಿತ ಪುಷ್ಪ ರೂಪನೆ
ಪುಷ್ಪಕೇಶದ ಪುಷ್ಪ ಲೋಲನೆ
ಪುಷ್ಪನಾಭನೆ ಪುಷ್ಪನೇತ್ರನೆ
ಪುಷ್ಪಭಕ್ತನ ಕಾಯಲೈ! ||೧೦||

ಚಂದರೂಪನೆ ನಂದಗೋಪನೆ,
ಇಂದುಮುಖಿಯರ ರಮ್ಯ ರಮಣನೆ
ಬಂಧನಾಶನೆ ಮಂದಹಾಸನೆ
ವಂದಿಪೆನು ನಾ ರಕ್ಷಿಸೆ. ||೧೧||

ರಾಮಕೃಷ್ಣನೆ ಪರಮಹಂಸನೆ
ಸೋಮ ತೇಜ ವಿವೇಕನಂದನೆ
ವ್ಯೋಮರೂಪನೆ ಬೀಮಕಾಯನೆ,
ಕಾಮದಾಹನೆ ರಕ್ಷಿಸೈ. ||೧೨||

ಫಾಲನೇತ್ರನೆ ಕಾಲಹೇತುವೆ
ಕಾಲಕಾರಣ ಕ್ಷೇತ್ರಕಾರಣ
ಕಾಲರೂಪನೆ ಕಾಲಪಾಲನೆ,
ಪಾಲಿಸೈ ಮಹದೇವನೆ. ||೧೩||

ವಿಶ್ವರೂಪನೆ ವಿಶ್ವಜ್ಞಾನಿಯೆ
ವಿಶ್ವನಂದನೆ ವಿಶ್ವಲೋಲನೆ
ವಿಶ್ವಕರುಣಾ ವಿಶ್ವಸಾಗರ
ವಿಶ್ವಹೇತುವೆ ಪಾಲಿಸೈ. ||೧೪||

ರೂಪರಹಿತನೆ ರೂಪಸಹಿತನೆ
ರೂಪಿನೊಳಗತಿಚೆಲ್ವರೂಪನೆ
ಪಾಪನಾಶನೆ ಕಾಲಪಾಶನೆ
ಗೋಪಿ ಲೋಲನೆ ಕಾಯೆಲೈ. ||೧೫||

ಗಿರಿಜೆ ಲೋಲನೆ ಗೌರಿ ನಾಥನೆ
ಪರಿಘ ಪಾಣಿಯೆ ಶೌರಿ ಮಿತ್ರನೆ
ಶಿರದಿ ಇಂದುವ ಧರಿಸಿದಾತನೆ
ಹರನೆ ಕರುಣಿಸಿ ಕಾಯೆಲೈ. ||೧೬||

ಗೌರಿಶಿಖರದಿ ಮೆರೆವ ದೇವನೆ,
ಗೌರಿರಾಗದ ಪಣೆಯ ನೇತ್ರನೆ,
ಗೌರಿಕಾಯನೆ ಗೌರಿನಾಥನೆ,
ಗೌರಿಲೋಲನೆ ರಕ್ಷಿಸೈ. ||೧೭||

ಇನಿತು ಪಾಡುವಕಾವ ದೇವನ
ವನದ ಸೊಬಗನು ನೋಡಿ ಪೊಗಳುತ
ಮನದಿ ಸಂತಸ ತುಂಬಿ ತುಳುಕುತ
ಬನದಿ ನಡೆದನು ಅಮಲನು. ||೧೮||

ಎಲ್ಲಿ ನೋಡಿದರಲ್ಲಿ ಕೊಂಬೆಯು
ಮಲ್ಲಿಗೆಯ ಸೊಬಗಿಂದ ಮಿನುಗುತ

ಸಲ್ಲಲಿತ ಪರಿಮಳವ ಬೀರುವ
ಎಲ್ಲರೊಡೆಯನ ತೋರಿತು! ||೧೯||

ಲಲಿತ ಗಂಧವನಿತ್ತು ಎಸೆಯುವ
ಹಳದಿ ಸೇವಂತಿಗೆಯು ಸೊಬಗನು
ಆಲರು ಅರಳಿದ ಪೂಗಳಿಂದಲಿ
ಹಲವು ಬಗೆಯಿಂ ಬೀರಿತು. ||೨೦||

ಮಧುರ ಕಂಪನು ಕೊಡಲು ಸಂಪಗೆ,
ಅದರ ರಸವನು ಬಿಡುತ ತುಂಬಿಯು
ಬೆದರಿ ಮರಣಕೆ ಬೇರೆ ಪೂಗಳ
ಚದುರತನದಲಿ ಹೀರಿತು. ||೨೧||

ಮುಳ್ಳು ಗಿಡದಲಿ ಎಸೆವ ಜಾಜಿಯ
ಕಳ್ಳತನದಲಿ ಏರಿ ಗಿಡವನು,
ಹಳ್ಳಿಕುಂಚನು ಬರಿದೆ ಕೀಳುತ
ಹುಲ್ಲು ಹಸುರೊಳು ಬಿಸುಟನು. ||೨೨||

ಎಲ್ಲಿ ನೋಡಿದರಲ್ಲಿ ಪೂಮಯ!
ಬಲ್ಲಿದರು ನೋಡಿದೊಡೆ ಚಿನುಮಯ!
ನಲ್ಲನಹ ನೋಟಕ್ಕೆ ಸತಿಮಯ!
ಎಲ್ಲಿಯಂ ಮಯವೆಸೆದುದು! ||೨೩||

ಹರಡಿ ಮಾರುತ ವನದಲೆಲ್ಲಿಯು
ಸರಸವಾಡುತ ಅಲರ ಜೊತೆಯಲಿ
ಪರಿಮಳವ ಸೊಬಗಿಂದ ಬೀರುತ
ಸರಿಸದಲಿ ನಲಿದಾಡಿದ! ||೨೪||

ಕಷ್ಟವೆಲ್ಲವ ಮರೆತು ಅಮಲನು
ಇಷ್ಟದೇವನ ಪಾಡಿ ಪೊಗಳುತ
ಶಿಷ್ಟಮನದಲಿ ಪೋಗುತಿರಲೂ
ಅಷ್ಟರಲಿ ರವಿ ಬೆಳಗಿದ! ||೨೫||

# 26-50

ಉದಯವಾಗುವ ರವಿಯ ಚಂದವ
ಮುದದಿ ನೋಡುತ ಮೀರೆ ಸಂತಸ
ಹೃದಯ ಹರುಷದಿ ಹಾರಿ ಕುಣಿಯಿತು;
ವದನ ಸಂತಸ ತೋರಿತು ||೧೬||

ಮೂಡಣೆಲ್ಲವು ಹೊನ್ನ ಬಣ್ಣದಿ
ನಾಡನೆಲ್ಲಿಯು ಬೆಳಗಿ ನಲಿಯುತ,
ಬಾಡಿ ಬಳಲದ ಅಲರನೆಲ್ಲವ
ನೋಡಿ ಸಂತಸ ಗೊಂಡಿತು! ||೧೭||

ಮಿಸುನಿ ಕಾಂತಿಯ ಮೀರಿ ಥಳಿಸುವ
ಬಿಸಜ ಬಾಧವನುದಯವಾಗಲು,
ಬಿಸಜ ಸಂಭವ ಸೃಷ್ಟಿ ಸಕಲವು
ಅಸಮ ಘೋಷದಿ ನಲಿಯಿತು! ||೧೮||

ಜೀವ ಪರಮನ ಸೇರುವಂದದಿ,
ಪೂವು ಕವಿಯನು ಅಪ್ಪುವಂದದಿ,
ಬೇವು ಅರಳಿಯ ತುಡುಕುವಂದದಿ,
ಆವಿ ಮೇಘವನಪ್ಪಿತು! ||೧೯||

ಮಂದ ಹಾಸಿತ ಪಸರು ಪಸುರಲಿ
ವಿಂದು ಬಿಂಬಿತ ರವಿಯ ರಶ್ಮಿಯು
ಇಂದು ಸಸಿರವೆಂಬ ತೆರದಲಿ
ಅಂದದಿಂ ತಾ ಕುಣಿಯಿತು! ||೨೦||

ಹಸುರು ಹುಲ್ಲಿನ ಅಂಚಿನಿಂದಲಿ
ಬಿಸಜ ಕೋಟಿಯ ಪೆರ್ಮೆಯಿಂದಲಿ
ಹಸಿದು ಮೊರೆಯುವ ಅಳಿಗಳಿಂದಲಿ
ಮಿಸುನಿ ಸರಸವು ಮೆರೆಯಿತು! ||೨೧||

ಪುಷ್ಪಮಿಸುನಿಗಳಿಂದ ಶೋಭಿತ
ಪುಷ್ಪಗಂಧದ ಪುಷ್ಪವತಿಯರು
ಪುಷ್ಪತರುಣರಂ ನೋಳ್ಪ ತೆರದಿಂ
ಪುಷ್ಪಗಳು ತಾವ್ ಮೆರೆದವು! ||೨೧||

ಬಣ್ಣ ಬಣ್ಣದ ಹಣ್ಣು ಹೂಗಳು,
ಬಣ್ಣ ಬಣ್ಣದ ಪಕ್ಕಿ ಪಶುಗಳು,
ಬಣ್ಣ ಬಣ್ಣದ ಕೀಟ ಕ್ರಿಮಿಗಳು,
ಬಣ್ಣ ಬಣ್ಣದಿ ಮೆರೆದುವು! ||೨೨||

ಹರಿಯು ಚಿರತೆಯು ಇರುವ ಗುಹೆಯಿಂ,
ಹರಿಯ ವೇಗದಿ ಕರಿಯ ವೇಗದಿ,
ಹರಿದು ನಿರುತದಿ ಬರುವ ತೊರೆಗಳು
ಮೊರೆವ ಗೀತದಿ ಮೆರೆದವು ||೨೪||

ಕೆಂಪು ದುಂಬಿಯು ನಂಜಬಟ್ಟಲು,
ಗುಂಪು ಗುಂಪಿನ ಚಂಡುಹೂಗಳು,
ಕಂಪು ಗೊರಟೆಯು ಚಂಪ ಪುಷ್ಪವು
ಸೊಂಪಿನಿಂದಲಿ ಮೆರೆದುವು. ||೨೫||

ಮೃಗಗಳೆಲ್ಲವು ಗವಿಯ ಬಿಡುತಲಿ
ಅಗಲಿ ತಮ್ಮಯ ಜೊತೆಯ ಜೀವಿಯ
ನಗರದೊಡೆಯನ ನುತಿಸಿ ಮನದಲಿ
ಹಗಲ ಪಯಣಕೆ ಹೊರಟವು. ||೨೬||

ಗಿರಿಯ ಮೇಲಿನ ತರುಗಳೆಡೆಯಲಿ
ಮರಿಯ ಸಂಗಡ ಸರಸವಾಡುತ
ಅರಿಯ ಹುಯಿಲನು ತಿರುಗಿ ನೋಡುತ
ಹರಿಣ ನಲಿಯುತ ನಿಂತಿತು. ||೨೮||

ಹಸುರು ಹುಲ್ಲಿನ ಮೇಲೆ ನೆಗೆಯುತ
ಬಿಸಿಲ ಜಳದಲಿ ಮೈಯನೊಟ್ಟಿದ

ಶಶವು ಬೇಗದಿ ಅರಿಯನಾಲಿಸಿ
ನುಸುಳಿ ಓಡಿತು ಪೊದರಿಗೆ. ||೩೮||

ಹುಲ್ಲು ಮೇಲಿಹ ಹನಿಯನೊರಸುತ
ನಲ್ಲನಗಲುತ ಹೊರಟು ಮೇಯಲು
ಹುಲ್ಲೆ ತಾ ಸಡಗರದ ಮನದಿಂ
ಅಲ್ಲಿ ಚಿಮ್ಮಿತು ಹರುಷದಿ. ||೩೯||

ಇನಿತು ಮೃಗಗಳು ನಲಿಯುತಲ್ಲಿರೆ,
ವನದ ಮೇಲಿಹ ಖಗಗಳೆಲ್ಲವು
ಇನನು ಮೂಡಿದನೆಂದು ಪಾಡುತ
ಬನದಲೆಲ್ಲಿಯು ಮೆರೆದುವು! ||೪೦||

ಫಲಿತ ಫಲಗಳ ಆಸೆಗೋಸುಗ
ನಲಿವ ಬಣ್ಣದ ಶುಕಗಳೆಲ್ಲವು
ಬಲಿದ ಹಸಿವೆಯ ತಾಪದಿಂದಲಿ
ಮಲೆಗೆ ಭರದಲಿ ಬಂದುವು. ||೪೧||

ಮಧುರ ಮಾವನು ಸವಿದು ಹರುಷದಿ
ಬಿದಿರ ಮೆಳೆಗಳ ತುದಿಯನೇರುತ
ಉದಯ ಬಿಸಿಲಲಿ ಗರಿಯ ಸವರುತ
ಮುದದಿ ಶುಕಗಳು ಎಸೆದುವು. ||೪೨||

ಶುಕನು ಪಾಡಿದ ಲಲಿತ ರಾಗವ
ಪಿಕನು ಕೇಳಲು ಪೆರ್ಮೆಯಿಂದಲಿ
ಮುಖವ ತೋರದೆ ತಳಿರ ಮರೆಯಲಿ
ಶುಕನ ಮೀರಲು ಪಾಡಿತು. ||೪೩||

ಅಡವಿಯೆಲ್ಲಿಯು ತುಂಬಿ ರವದಲಿ
ಬಿಡದೆ ಅಮಲನ ಅಮಲ ಮನದಲಿ
ಬಡವರಾಗಿಹ ನರರಿಗೆಲ್ಲವು
ಅಡವಿ ಅರಮನೆ ಎಂದನು. ||೪೪||

ಇನಿತು ತರುಗಳ ಚೆಲುವ ನೋಡುತ
ಬನದ ಖಗಗಳ ದನಿಯ ಕೇಳುತ
ಮನದಿ ಸಂತಸ ತುಂಬಿ ನಲಿಯುತ
ವನದಿ ನಡೆದನು ಅಮಲನು. ||೪೫||

ಒಣಗಿ ಬಾಡಿದ ಮರವನರಸುತ
ಗಣಿಸಲೊಲ್ಲದೆ ಮುಳ್ಳು ಸಿಲೆಗಳ
ಮಣಿಸಿ ಶಿರವನು ಕಠಿಣ ಪೊದರಲಿ
ದಣಿವು ಕಾಣದೆ ನೆಡೆದನು. ||೪೬||

ಬೆಟ್ಟವೆಲ್ಲವ ಬಿಡದೆ ಹುಡುಕುತ
ದಿಟ್ಟತನದಲಿ ಏರಿ ಇಳಿಯುತ
ನೆಟ್ಟ ಮನದಲಿ ತಿರುಗಿ ತಿರುಗೀ
ಕಟ್ಟ ಕಡೆಯಲಿ ಕಂಡನು. ||೪೭||

ತರುವ ನೋಡಲು ಹರುಷದಿಂದಲಿ
ಭರದಿ ಸೇರುತ ಅದರ ಬುಡವನು
ಕರದ ಕೊಡಲಿಯ ಸರಿಯ ಮಾಡುತ
ಮರವ ಕಡಿಯಲು ನಿಂತನು. ||೪೮||

ಕಡಿತವೆಲ್ಲವು ಕಠಿಣವಾಗಲು
ಅಡವಿಯೆಲ್ಲೆಡೆ ಧ್ವನಿಯ ಬೀರಿತು;
ಬಿಡದೆ ಅಮಲನು ಕಡಿದು ಕಡಿದೂ
ಎಡರನೆಲ್ಲವ ನೀಗಿದ. ||೪೯||

ಬಸವಳಿದು ಬೆಂಡಾಗಿ ನೆರಳಲಿ
ತೃಷೆಯ ಹೆಚ್ಚಲು ಬಿಸಿಲ ಝಳದಿಂ,
ಪಸರಿಸಿದ ಬಲು ಬನವ ನೋಡುತ
ಉಸಿರು ಬಿಡುತಲಿ ಮಲಗಿದ. ||೫೦||

# 51-75

ಎಳೆಯ ಗರುಕೆಯ ಮೇಲೆ ಮಲಗಿ
ತಳಿರ ಜೊತೆಯಲಿ ಆಟವಾಡುತ
ಇಳೆಯ ಅಂದವ ನೆನೆದು ಪೊಗಳಿದ
ಗೆಳೆಯನಾಗಿಹ ದೇವನ. ||೫೧||

ದೇವ ನಿನ್ನಯ ನಾಮ ಕೀರ್ತನೆ
ಸಾವು ಎಂಬುದರ ದೂರ ಮಾಡಿತು;
ಆವ ಜನ್ಮದ ಪಾಪವಾದರು
ದೇವ ಎಂದೊಡೆ ಓಡಿತು. ||೫೨||

ತಿಮಿರ ತೇಜಗಳೆರಡರಲ್ಲಿಯು,
ಅಮರರಲ್ಲಿಯು ಅಸುರರಲ್ಲಿಯು,
ಕಮಲ ದುಂಬಿಗಳೆರಡರಲ್ಲಿಯು
ಅಮಲರೂಪದಿ ನೆಲೆಸಿಹೆ. ||೫೩||

ಕಷ್ಟ ನಷ್ಟಗಳಲ್ಲಿ ನೆಲೆಸಿಹೆ;
ದಿಟ್ಟ ಮನುಜರ ಜೀವವಾಗಿಹೆ;
ಸೃಷ್ಟಿ ಲಯಗಳ ಹೇತುವಾಗಿಹೆ;
ಶಿಷ್ಟ ರಕ್ಷಕನಾಗಿಹೆ. ||೫೪||

ಮೋಡದಲ್ಲಿಯು ನೀನೆ ಅಡಗಿಹೆ;
ಕಾಡಿನಲ್ಲಿಯು ನೀನೆ ತುಂಬಿಹೆ;
ನಾಡಲೆಲ್ಲಿಯು ನೀನೆ ಕಾಣುವೆ;
ಮೋಡಿಗಾರನು ನೀನಹೆ! ||೫೫||

ಪಾಡಿ ಮಲಗಿಹ ಅಮಲ ಬೇಗದಿ
ಓಡಿ ಬರುತಿಹ ಭರವನಾಲಿಸಿ
ಹಾಡನಲ್ಲಿಯೆ ನಿಲಿಸಿ ಭಯದಲಿ
ನೋಡಿ ಸುತ್ತಲು ಎದ್ದನು. ||೫೬||

ಏಳುತೇಳುತ ಸುತ್ತ ನೋಡಲು
ಕೀಳುತಲ್ಲಿಯ ನೆಲವ ಭರದಲಿ
ಕಾಲ ವೇಗದಿ ಬರುವ ಹರಿಣನ
ಹಾಲ ಕಾಯುವ ನೋಡಿದಾ. ||೫೭||

ಜೀವದಾಶೆಗೆ ಬರುತ ಹರಿಣನು
ಮಾವಿನಡಿಯಲಿ ನಿಂತ ಅಮಲನ
ಭಾವ ಬುದ್ಧಿಯನರಿದು ಹರುಷದಿ
ಕಾವುದೆನ್ನನು ಎಂದಿತು! ||೫೮||

ಯಾರು ನಿನ್ನನು ಕೊಲಲು ಬರುವರು?
ಯಾರಿಗೇನನು ನೀನು ಮಾಡಿದೆ?
ಮಾರಮಾಚದೆ ಬೆಸಗು ಬೇಗದಿ
ಮಾರಿ ಬಂದರು ನೂಕುವೆ! ||೫೯||

ದುರಳನೊಬ್ಬನು ಅಟ್ಟಿ ಬರುವನು
ಭರದಿ, ನನ್ನನು ಪೊರೆಯೊ ತಂದೆಯೆ;
ಬೆರಸಿ ಬರುವನು ಬರಿದೆ ನನ್ನನು
ಹರಿಯ ಆಣೆಯು ಎಂದಿತು. ||೬೦||

ನಿರಪರಾಧಿಯ ಕೊಲುವ ಅಧಮನ
ಇರದೆ ಅಮಲನು ವಿಗಡತನದಲಿ
ಶಿರವನರಿಯದೆ ಬಿಡುವುದಿಲ್ಲವು
ಹರಿಣ ಆಲಿಸು ಎಂದನು. ||೬೧||

ಎಳೆಯ ಮರಿಯನು ವನದೊಳಿರಿಸುತ
ಹೊಳೆಯ ನೀರನು ಕುಡಿಯಲೋಸುಗ
ಬಳಿಗೆ ಭರದಿಂ ಬಂದೆನೆನ್ನುತ
ಅಳುತೆ ಹರಿಣವು ಹೇಳಿತು. ||೬೨||

ಅಮಲನಾಗಿಹ ನಾನು ನಿನ್ನನು
ಕಮಲನಾಭನ ಆಣೆಯಾಗಿಯು

ವಿಮಲತನವನು ಉಳಿಸಿಕೊಳ್ಳಲು
ಅಮಲ ಜೀವವನುಳುಹುವೆ. ||೬೩||

ಅಳುವ ಹರಿಣನ ಸುಮ್ಮನಿರಿಸುತ,
ಮಲಿದ ಕೋಪವ ಹೊರಗೆ ತೋರದೆ,
ಹಳುವ ಮರೆಯಲಿ ಇರಿಸಿ ಹರಿಣನ
ಫಲವ ನೋಡಲು ನಿಂತನು. ||೬೪||

ಉಭಯರೀಪರಿ ನೋಡುತಲ್ಲಿರೆ
ನಭದ ವರೆವಿಗು ಧೂಳನೇಳಿಸಿ
ರಭಸದಿಂದಲಿ ಓಡಿ ಬರುತಿಹ
ಶಬರ ದೈತ್ಯನ ಕಂಡರು. ||೬೫||

ಕರದಲೊಂದನು ಬಿಲ್ಲ ಪಿಡಿದೂ,
ಶರವನೆಳೆಯುತ ಕಿವಿಯುವರೆಗೂ
ಹರಿಣ ಓಡಿದ ಹುಯಿಲನರಸುತ
ತುರಗವೇಗದಿ ಬಂದನು. ||೬೬||

ಗರಿಯ ವೇಗದಿ ಬರುತ ಬೇಡನು
ನೆರಳ ಮರೆಯಲಿ ನಿಂತ ಅಮಲನ
ತಿರುಗಿ ನೋಡುತ ಹರುಷ ಮನದಿಂ
ಹರಿಣ ಹುಯಿಲನು ಕೇಳಿದ. ||೬೭||

ಹರಿಣನಿಲ್ಲಿಗೆ ಬರಲೆ ಇಲ್ಲವು;
ಅರಿಯದವನನು ಕೇಳ ಬೇಡಲೊ!
ಹರಿಯ ಹೊಡೆಯಲು ಸಾಗಲಾರದೆ
ಹರಿಣನೇತಕೆ ಹೊಡೆಯುವೆ? ||೬೮||

ಧರಣಿಯೊಳಗಿಹ ಜೀವರೊಳಗೆ,
ಇರಳು ಚಲಿಸುಚ ಅಸುರರೊಳಗೆ,
ನರನು ಪರಮನು ಎಂದು ಉಸುರಲು
ಕರುಣೆ ಎಂಬುದೆ ಸಾಕ್ಷಿಯು! ||೬೯||

ಕರುಣೆ ಎಂಬುದು ದೇವ ದೇವನ
ಪರಮ ಸನ್ನಿಧಿಯಿಂದ ಬರುವುದು!
ಕರುಣೆ ಎಂಬುದೆ ನರರು ಸುರರೊಳು
ಹರಿಯ ನಾಮದಿ ಚರಿಪುದು! ||೬೦||

ಕರುಣೆಯೆಂಬುವ ಮುಕುಟಕಿಂತಲು
ದೊರೆಗೆ ಬೇರೆಯ ಮುಕುಟವಿರುವುದೆ?
ಕರುಣೆ ಎಂಬಾ ಖಡ್ಗಕಿಂತಲು
ಪರಮ ಖಡ್ಗವು ಇರುವುದೆ? ||೬೧||

ಅರಸರೊಳಗದು ಮುಕುಟ ರೂಪದಿ,
ಪುರುಷರೊಳಗದು ವೀರ ರೂಪದಿ,
ತರುಣಿಯೊಳಗದು ಪುಷ್ಪ ರೂಪದಿ,
ಕರುಣೆಯೆಂಬುದು ಮೆರೆವುದು. ||೬೨||

ಕರುಣೆ ಎಂಬುವ ಪುಷ್ಪವೊಂದನು
ಪುರುಷನಾವನು ಧರಿಸಿ ಇರುವನೊ,
ಅರಿಗಳಾತನ ಗೆಳೆಯರಾಪರು
ಉರಿಯು ಶೀತಳಮಾಪುದು ||೬೩||

ಕರುಣ ಸಾಗರದಲ್ಲಿ ತೇಲುವ
ನರನ ಹಡಗವು ಅಚಲಮಾದುದು;
ಕರುಣ ಸಾಗರನಾದ ದೇವನೆ
ಭರದಿ ಬರುತಲಿ ಕಾಯ್ವನು! ||೬೪||

ಮರಣ ಕಾಲದಿ ಸುತ್ತ ನೋಡಲು
ಹಿರಿಯ ಸೋದರ ಕಿರಿಯ ಸೋದರಿ
ಬರಿದೆ ಅಳುತಲಿ ಇರುವ ಕಾಲದಿ
ಕರುಣೆ ಅಭಯವನೀವುದು! ||೬೫||